# ಪ್ರೀತಿಯ ವಿಧ್ವಂಸಕ – ಅಸೂಯೆ

ಅರಿಷಡ್ವರ್ಗಗಳಲ್ಲಿ ಮಾತ್ಸರ್ಯ ಅಥವಾ ಅಸೂಯೆಯೂ ಒಂದು. ಕಾಮ, ಕ್ರೋಧ, ಲೋಭ, ಮೋಹ ಮತ್ತು ಮದಗಳ ಜೊತೆಯಲ್ಲಿ ಇದಕ್ಕೂ ಗಣ್ಯಸ್ಥಾನ. ಇತರ ಅರಿಷಡ್ವರ್ಗಗಳು ಪೂರ್ತಿಯಾಗಿ ಮಾನವನಲ್ಲಿನ ಆಂತರಿಕ ಅಜ್ಞಾನದಿಂದ ಉಂಟಾದಂಥವು. ಆದರೆ, ಅಸೂಯೆಯು ಇತರರ ಮೇಲೆ ಅವಲಂಬಿತವಾಗಿರುವ ಭಾವನೆ. ನಾವು ಅಸೂಯೆ ಪಡುವವರು ಹೆಚ್ಚು ಹೆಚ್ಚು ಸುಖವನ್ನು ಹೊಂದಿದಷ್ಟೂ, ನಾವು ಹೆಚ್ಚು ಹೆಚ್ಚು ಕಷ್ಟವನ್ನು ಅನುಭವಿಸುತ್ತೇವೆ. ಅಂದರೆ ನಮ್ಮ ದುರವಸ್ಥೆಗೆ ಇತರರ ಏಳಿಗೆಯೇ ಕಾರಣವಾಗುತ್ತದೆ. ಹೀಗೆ ಈ ಭಾವನೆ ಸಂಪೂರ್ಣವಾಗಿ ತರ್ಕಹೀನ ಮತ್ತು ಅಸಂಬದ್ಧವಾದದ್ದು.

ಅಸೂಯೆ ಮನುಷ್ಯನಲ್ಲಿ ಹೇಗೆ ಉಂಟಾಗುತ್ತದೆ? ಇದರ ಅಧ್ಯಯನವನ್ನು ಅಮೆರಿಕದ ಟೆಕ್ಸಾಸ್ ವಿಶ್ವವಿದ್ಯಾನಿಲಯದ ಮನಃಶಾಸ್ತ್ರಜ್ಞರಾದ ಡೇವಿಡ್ ಬಸ್ ಅವರು ಕೈಗೊಂಡಿದ್ದಾರೆ. ಅವರ ಪ್ರಕಾರ ಅಸೂಯೆಂಬುದು ಮೋಹಜನಿತವಾದ ಭಾವನೆ. ಇಲ್ಲದ್ದನ್ನು ಇದೆ ಎಂದುಕೊಳ್ಳುವುದೇ ಮೋಹ. ಇದು ಸಂಪೂರ್ಣವಾಗಿ ಭ್ರಮಾತ್ಮಕವಾದುದು. ಹೀಗಾಗಿ ಅಸೂಯೆಯೂ ಭ್ರಮೆ ಅಥವಾ ಮಿಥ್ಯಾಭಾವನೆಯಷ್ಟೆ.

ಅಸೂಯೆಯು ಉಂಟಾಗುವುದು ಎರಡು ಕಾರಣಗಳಿಂದ ಎಂದು ಪ್ರೊ. ಬಸ್ ಅವರು ಅಭಿಪ್ರಾಯಪಡುತ್ತಾರೆ. ಮೊದಲನೆಯದು **ಭಾವನಾತ್ಮಕ ಅಸ್ಥಿರತೆ**. ಅಂದರೆ, ಅಹಿತಕಾರಿ ಭಾವನೆಗಳಾದ ಕೋಪ, ಕಳವಳ ಮತ್ತು ಖಿನ್ನತೆಗಳಿಗೆ ಸುಲಭವಾಗಿ ಒಳಗಾಗುವ ದುರ್ಬಲ ಮನಃಸ್ಥಿತಿ. ಈ ಬಗೆಯ ಅಸ್ಥಿರತೆಯ ಪ್ರಮಾಣ ಹೆಚ್ಚಾಗಿದ್ದಷ್ಟೂ ಒಬ್ಬ ವ್ಯಕ್ತಿ ಬಹಳ ಸುಲಭವಾಗಿ ಅಸೂಯೆಯ ವಶವಾಗುತ್ತಾನೆ.

ಎರಡನೆಯ ಕಾರಣವೆಂದರೆ, **ಭಾವನಾತ್ಮಕ ಅಭದ್ರತೆ**. ಸ್ಟೆವೆನ್ ಸ್ಟೋನ್ನಿ ಎಂಬ ಮನಃಶಾಸ್ತ್ರಜ್ಞರ ಪ್ರಕಾರ ಅಸೂಯೆಯು ಅಸುರಕ್ಷಿತ ವ್ಯಕ್ತಿಯ ಅಭದ್ರ ಸಂಬಂಧಗಳ ಮೇಲೆ ನಿಂತಿದೆ. ಒಬ್ಬನು ತನ್ನ ಅಂತರಂಗದಲ್ಲಿ ಅಪೂರ್ಣತೆಯ ಭಾವನೆಯನ್ನು ಬೆಳೆಸಿಕೊಂಡಿರುವುದರಿಂದಲೇ ಅವನಿಗೆ ಅಸೂಯೆಯ ಭಾವನೆಯು ಉತ್ಪನ್ನವಾಗುವುದು. ಅತೃಪ್ತಿಯ ಮನೋಧರ್ಮವು ಕೋಪ ಮುಂತಾದ ಅಸುಖ ಭಾವನೆಗಳಿಗೆ ಎಡೆಮಾಡಿಕೊಡುವುದು. ಇದರಿಂದ ಸಂಬಂಧಗಳಲ್ಲಿ ಪರಸ್ಪರ ಅವಿಶ್ವಾಸ ಮೂಡಿ, ಸಂದೇಹ ಅನುಮಾನಗಳ ರೂಪವನ್ನು ತಳೆಯುವುದು. ಇದರ ಫಲಶ್ರುತಿಯಾಗಿಯೇ ಅಸೂಯೆ ಹೊರಹೊಮ್ಮುವುದು. ಅಂದರೆ ನಾವು ಯಾರನ್ನು ಪ್ರೀತಿಸಲು, ಪ್ರಶಂಸಿಸಲು ವಿಫಲರಾಗುತ್ತೇವೆಯೋ, ಅಂಥವರ ಮೇಲೆ ಅಸೂಯೆಯನ್ನು ಬೆಳೆಸಿಕೊಳ್ಳುತ್ತೇವೆ.

ಇದೇ ಅಸೂಯೆಯ ಕೇಂದ್ರಬಿಂದು ಎಂದು ಫ್ರಾನ್ಸ್ ದೇಶದ ಮನೋವಿಜ್ಞಾನಿ ಮರ್ಸಿಯಾನ್ ಬೆಲ್ವಿಸ್ ಹೇಳುತ್ತಾರೆ. ಅವರ ಪ್ರಕಾರ ಅಸೂಯೆಯು ಪ್ರೇಮದ ವಿಧ್ವಂಸಕನಾಗಿ ಕೆಲಸ ಮಾಡುತ್ತದೆ. ನಮ್ಮಲ್ಲಿರುವ ಅಸುರಕ್ಷಿತ ಭಾವನೆಯು, ನಮ್ಮ ಎದುರಾಳಿ ನಮಗಿಂತ ಶ್ರೇಷ್ಠನಾದವನು ಎಂಬ ಭಾವನೆಯನ್ನು ಕೆರಳಿಸುತ್ತದೆ. ಹೀಗಾಗಿ ಅಸೂಯೆಯ ಹಿನ್ನೆಲೆಯಲ್ಲಿ ಇರುವುದು, ಒಬ್ಬನು ತನ್ನ ಅಸ್ತಿತ್ವದ ಉಳಿವನ್ನು ಕಾಪಾಡಿಕೊಳ್ಳಲು ನಡೆಸುತ್ತಿರುವ ಹತಾಶ ಹೋರಾಟವಲ್ಲದೆ ಬೇರೆಯಲ್ಲ.

ಈ ಅಸೂಯೆಯ ಭಾವನೆಗೆ ಪೋಷಣೆ ದೊರಕುವುದು ಸಂದೇಹದಿಂದ. ಆದರೆ ನಾವು ಸಂದೇಹಪಡುತ್ತಿರುವುದಾದರೂ ಏನನ್ನು? ಎಲ್ಲ ಮಾನವೀಯ ಸಂವೇದನೆಗಳೂ ಈ ಜಗತ್ತಿನಲ್ಲಿ ನಮ್ಮ ಸ್ಥಾನವೇನು, ಪಾತ್ರವೇನು ಎಂಬುದನ್ನು ಗ್ರಹಿಸಿಕೊಳ್ಳಲೆಂದೇ ಮೂಡಿಬರುತ್ತವೆ. ಅಸೂಯೆಯೂ ಇದಕ್ಕೆ ಅಪವಾದವೇನಲ್ಲ. ನಮ್ಮ ಸ್ಥಾನವು ಅಪಾಯದಲ್ಲಿದೆ ಎಂದು ಮೊದಲು ಭಾವಿಸಿಕೊಳ್ಳುತ್ತೇವೆ. ಅದರಿಂದ ಅಸೂಯೆ ಬರುತ್ತದೆ. ಹೀಗೆ ನಾವು ಅಸೂಯೆ ಪಡುವಾಗ, ನಮ್ಮ 'ತಾದಾತ್ಮ್ಯತೆಯ ಸಂಕಷ್ಟ' ದ (identity crisis) ಕಪಿಮುಷ್ಟಿಯಲ್ಲಿ ಸಿಲುಕಿಹಾಕಿಕೊಂಡಿರುತ್ತೇವೆ.

ನಮ್ಮದೆಂದು ಗುರುತಿಸಿಕೊಂಡದ್ದನ್ನು ಕಾಪಾಡಿಕೊಳ್ಳುವ ನಮ್ಮ ಹುನ್ನಾರದಲ್ಲಿ ನಾವು ತಪ್ಪುದಾರಿಯನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ನಾವು ಅಸೂಯೆಯ ಗುರಿಯನ್ನಾಗಿ ಮಾಡಿಕೊಂಡ ವ್ಯಕ್ತಿಯು ನಮ್ಮ ಆತ್ಮಪ್ರತಿಷ್ಠೆಯನ್ನು ಹಾಳು ಮಾಡುತ್ತಿದ್ದಾನೆಂದು ಭಾವಿಸಿಕೊಳ್ಳುತ್ತೇವೆ. ಅವನಲ್ಲಿ ಇರುವ, ಆದರೆ ನಮ್ಮಲ್ಲಿ ಇಲ್ಲದ ಮಾಂತ್ರಿಕ ಪ್ರಭೆಯನ್ನು ಅವನು ಹೊರಸೂಸುತ್ತಾನೆ ಎಂದುಕೊಳ್ಳುತ್ತೇವೆ. ಆದರೆ ನಿಜವಾಗಿಯೂ ಆ ಮಾಂತ್ರಿಕ ಶಕ್ತಿಯನ್ನು ಅವನ ಮೇಲೆ ಆರೋಪಿಸುವವರು ನಾವೇ ಹೊರತು, ಅದು ವಾಸ್ತವವಲ್ಲ. ನಮ್ಮಲ್ಲಿ ಇಲ್ಲದ, ನಾವು ಪಡೆದುಕೊಳ್ಳಲು ಕಾತರರಾಗಿರುವ ಅಥವಾ ಆಗಲು ಅತ್ಯಾಶೆ ಮಾಡುವ ಅಂಶಗಳನ್ನೇ ನಾವು ಅಸೂಯೆಪಡುವವರ ಮೇಲೆ ಹೊರಸುತ್ತೇವೆ. ಹೀಗೆ ಒಬ್ಬ ವ್ಯಕ್ತಿ ತಾನು ಪ್ರಗತಿ ಹೊಂದಬೇಕೆನ್ನುವ ಮಹದಾಕಾಂಕ್ಷೆಯನ್ನು ತಪ್ಪುಮಾರ್ಗದಲ್ಲಿ ಹರಿಸಿರುವುದೇ **ಅಸೂಯೆ** ಎನ್ನಿಸಿಕೊಳ್ಳುತ್ತದೆ.

ಹೀಗೆ, ಇತ್ತೀಚಿನ ದಿನಗಳಲ್ಲಿ ನಡೆದಿರುವ ಸಂಶೋಧನೆಗಳು ಅಸೂಯೆಯ ಬಗ್ಗೆ ಹೊಸಬೆಳಕನ್ನು ಚೆಲ್ಲುತ್ತವೆ. ಅಸೂಯೆಯು ವ್ಯಕ್ತಿಗತ ಜೀವನದಲ್ಲಿ ಹೇಗೆ ವಿಧ್ವಂಸಕಾರಿಯೋ ಹಾಗೆಯೇ ಸಾಮಾಜಿಕ ನೆಲೆಯಲ್ಲೂ ಕೂಡ ವಿಚ್ಛಿದ್ರಕಾರಿಯಾಗಿದೆ. ಈ ಅಂಶವನ್ನು ಸ್ವಾಮಿ ವಿವೇಕಾನಂದರು ಒತ್ತಿಹೇಳಿದ್ದಾರೆ. ಅದನ್ನು ನಿವಾರಿಸಿಕೊಳ್ಳುವ ಮಾರ್ಗದಲ್ಲಿ ಇದರ ವೈಜ್ಞಾನಿಕ ಅಧ್ಯಯನ ಮತ್ತು ಅರಿವು ಸಹಾಯ ಮಾಡುತ್ತವೆ. ಆದರೆ ನಿವಾರಣೆಯಂತೂ ನಮ್ಮನಿಮ್ಮೆಲ್ಲರ ಕೈಯಲ್ಲಿಯೇ ಇದೆ, ಅಲ್ಲವೇ?